**All India Radio: Bangalore**
**National Bulletin In Kannada**
**30.01.2025 13.10 p.m.**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**30.01.2025 13.10 p.m.**

**<><><><>**

ಮುಖ್ಯಾಂಶಗಳು

- ನಾಳೆಯಿಂದ ಸಂಸತ್ತಿನ ಬಜೆಟ್ ಅಧಿವೇಶನ ಆರಂಭ ; ಸುಗಮ ಕಲಾಪಕ್ಕೆ ಸರ್ವಪಕ್ಷಗಳ ಸಭೆ ಪ್ರಗತಿಯಲ್ಲಿ
- ನಿರ್ಣಾಯಕ ಖನಿಜಗಳ ಕುರಿತ ಸಂಪುಟದ ನಿರ್ಧಾರ ; ದೇಶ ಸ್ವಾವಲಂಬಿಯಾಗುವ ನಿಟ್ಟಿನಲ್ಲಿ ಮಹತ್ವದ ಹೆಜ್ಜೆ - ಪ್ರಧಾನಿ ನರೇಂದ್ರ ಮೋದಿ
- ದೇಶಾದ್ಯಂತ ಇಂದು ಹುತಾತ್ಮರ ದಿನ ಆಚರಣೆ ; ರಾಷ್ಟ್ರಪಿತ ಮಹಾತ್ಮಗಾಂಧೀಜಿ ಅವರ ಕೊಡುಗೆ ಸ್ಮರಣೆ
- ವಕ್ಫ್ ತಿದ್ದುಪಡಿ ಕಾಯ್ದೆ ಪರಿಶೀಲನೆ ; ಸಂಸತ್ತಿನ ಜಂಟಿ ಸಮಿತಿಯಿಂದ ಇಂದು ಸ್ಪೀಕರ್ ಓಂ ಬಿರ್ಲಾ ಗೆ ವರದಿ ಸಲ್ಲಿಕೆ
- ಹಾಕಿ ಇಂಡಿಯಾ ಲೀಗ್ ಪಂದ್ಯಾವಳಿ ; ನಾಳೆ ೪ ತಂಡಗಳು ಸೆಮಿಫೈನಲ್‌ನಲ್ಲಿ ಸೆಣಸು

<><><><>

ನಾಳೆಯಿಂದ ಸಂಸತ್ತಿನ ಬಜೆಟ್ ಅಧಿವೇಶನ ಆರಂಭವಾಗಲಿರುವ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಕರೆದಿರುವ ಸರ್ವಪಕ್ಷಗಳ ಸಭೆ ನವದೆಹಲಿಯಲ್ಲಿ ಪ್ರಗತಿಯಲ್ಲಿದೆ. ರಕ್ಷಣಾ ಸಚಿವ ರಾಜನಾಥ್ ಸಿಂಗ್, ಆರೋಗ್ಯ ಸಚಿವ ಜೆ.ಪಿ. ನಡ್ಡಾ, ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು, ಕಾಂಗ್ರೆಸ್ ಸಂಸದರಾದ ಜೈರಾಮ್ ರಮೇಶ್ ಮತ್ತು ಗೌರವ ಗೊಗೊಯ್, ಟಿಎಂಸಿಯ ಸಂಸದ ಸುದೀಪ್ ಬಂಡೋಪಾಧ್ಯಾಯ, ಸಮಾಜವಾದಿ ಪಕ್ಷದ ಸಂಸದ ರಾಮ್‌ಗೋಪಾಲ್ ಯಾದವ್, ಬಿಜೆಡಿ ಸಂಸದ ಸಂಸಿತ್ ಪಾತ್ರ ಹಾಗೂ ಡಿಎಂಕೆ ಸಂಸದ ಟಿ.ಆರ್. ಬಾಲು ಮತ್ತಿತರರು ಸಭೆಯಲ್ಲಿ ಉಪಸ್ಥಿತರಿದ್ದಾರೆ. ಸಭೆಯಲ್ಲಿ, ಸರ್ಕಾರವು ಸದನದ ನಾಯಕರೊಂದಿಗೆ ಚರ್ಚೆ ನಡೆಸಲಿದೆ ಮತ್ತು ಸುಗಮ ಕಲಾಪ ಖಾತ್ರಿಪಡಿಸಿಕೊಳ್ಳಲು ಪ್ರತಿಪಕ್ಷಗಳ ಸಹಕಾರವನ್ನು ಕೋರಲಿದೆ. ನಾಳೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಸಂಸತ್ತಿನ ಜಂಟಿ ಅಧಿವೇಶನವನ್ನು

ಉದ್ದೇಶಿಸಿ ಭಾಷಣ ಮಾಡಲಿದ್ದು, ಅದರೊಂದಿಗೆ ಬಜೆಟ್ ಅಧಿವೇಶನ ಆರಂಭವಾಗಲಿದೆ. ರಾಷ್ಟ್ರಪತಿಗಳ ಭಾಷಣದ ನಂತರ ಲೋಕಸಭೆ ಮತ್ತು ರಾಜ್ಯಸಭೆಗಳು ಸ್ವಲ್ಪ ಕಾಲ ಕಲಾಪ ನಡೆಸಲಿದ್ದು, ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಆರ್ಥಿಕ ಸಮೀಕ್ಷೆಯನ್ನು ಮಂಡಿಸಲಿದ್ದಾರೆ. ಶನಿವಾರ ಹಣಕಾಸು ಸಚಿವರು ಕೇಂದ್ರ ಬಜೆಟ್-೨೦೨೫-೨೬ ಅನ್ನು ಮಂಡಿಸುವರು. ಸೋಮವಾರ ರಾಷ್ಟ್ರಪತಿಗಳ ಭಾಷಣದ ಮೇಲಿನ ವಂದನಾ ನಿರ್ಣಯದ ಮೇಲೆ ಲೋಕಸಭೆ ಮತ್ತು ರಾಜ್ಯಸಭೆ ಚರ್ಚಿಸಲಿದೆ. ನಾಳೆ ಆರಂಭವಾಗುವ ಬಜೆಟ್ ಅಧಿವೇಶನದ ಮೊದಲ ಭಾಗವು ಫೆಬ್ರವರಿ ೧೩ ರವರೆಗೆ ಮುಂದುವರಿಯುತ್ತದೆ. ಬಜೆಟ್ ಅಧಿವೇಶನದ ಎರಡನೇ ಹಂತವು ಮಾರ್ಚ್ ೧೦ ರಿಂದ ಏಪ್ರಿಲ್ ೪ ರವರೆಗೆ ನಡೆಯಲಿದೆ.

<><><><>

೭೬ನೇ ಗಣರಾಜ್ಯೋತ್ಸವದ ಸಮಾರೋಪದ ಅಂಗವಾಗಿ ದೆಹಲಿಯ ವಿಜಯಚೌಕದಲ್ಲಿ ಕಳೆದ ರಾತ್ರಿ ನಡೆದ ಬೀಟಿಂಗ್ ರಿಟ್ರೀಟ್ ಕಾರ್ಯಕ್ರಮದಲ್ಲಿ ಎಲ್ಲ ಬ್ಯಾಂಡ್‌ಗಳು ಅತ್ಯುತ್ತಮ ಪ್ರದರ್ಶನ ನೀಡಿದವು ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಶ್ಲಾಘಿಸಿದ್ದಾರೆ. ತಮ್ಮ ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಸಂವಿಧಾನದ ೭೫ನೇ ವರ್ಷಾಚರಣೆ ಹಾಗೂ ತಾಯಿ ಹೆಸರಿನಲ್ಲಿ ಒಂದು ಗಿಡ ನೆಡುವ ಧ್ಯೇಯವನ್ನು ಒಳಗೊಂಡ ಚಕ್ರವ್ಯೂಹ ಮತ್ತು ಮಕರ ವ್ಯೂಹ ಸೇರಿದಂತೆ ಹಲವು ಪ್ರದರ್ಶನಗಳು ಗಮನ ಸೆಳೆದವು ಎಂದು ಅವರು ಹೇಳಿದ್ದಾರೆ. ಈ ಕಾರ್ಯಕ್ರಮ ಭಾರತದ ಸಾಂಸ್ಕೃತಿಕ ವೈವಿಧ್ಯತೆಯನ್ನು ಬಿಂಬಿಸಿದ್ದಲ್ಲದೇ ಸಶಸ್ತ್ರ ಪಡೆಗಳ ತ್ಯಾಗ ಮತ್ತು ಶೌರ್ಯಕ್ಕೆ ನಮನ ಸಲ್ಲಿಸಿದಂತಾಯಿತು ಎಂದು ತಿಳಿಸಿದ್ದಾರೆ.

<><><><>

ಕೇಂದ್ರ ಸಚಿವ ಸಂಪುಟ ನಿನ್ನೆ ನಿರ್ಣಾಯಕ ಖನಿಜಗಳ ಕುರಿತಂತೆ ಕೈಗೊಂಡಿರುವ ನಿರ್ಧಾರ ದೇಶವನ್ನು ಸ್ವಾವಲಂಬಿಯನ್ನಾಗಿ ಮಾಡುವ ನಿಟ್ಟಿನಲ್ಲಿ ಮಹತ್ವದ ಹೆಜ್ಜೆಯಾಗಿದೆ ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಬಣ್ಣಿಸಿದ್ದಾರೆ. ಅವರು, ತಮ್ಮ ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಕೇಂದ್ರ ಸಚಿವ ಸಂಪುಟ ರಾಷ್ಟ್ರೀಯ ನಿರ್ಣಾಯಕ ಖನಿಜಗಳ ಮಿಷನ್‌ಗೆ ಅನುಮೋದಿಸಿರುವುದರಿಂದ ಭಾರತದ ಹೈಟೆಕ್, ಶುದ್ಧ ಇಂಧನ, ರಕ್ಷಣೆ ಮತ್ತು ಇತರ ಪ್ರಮುಖ ಉದ್ಯಮಗಳಿಗೆ ಹೆಚ್ಚಿನ ಉತ್ತೇಜನ ದೊರಕಲಿದೆ ಎಂದರು. ಎಥೆನಾಲ್ ಖರೀದಿ ದರ ಪರಿಷ್ಕರಣೆ ಕುರಿತು ನಿರ್ಧಾರ ದೇಶದಲ್ಲಿ ಎಥೆನಾಲ್ ಉತ್ಪಾದನೆ ಮತ್ತು ಮಿಶ್ರಣ ಗುರಿ ಸಾಧನೆಗೆ ಹೆಚ್ಚಿನ

ಪ್ರೋತ್ಸಾಹ ನೀಡುತ್ತದೆ. ಜೊತೆಗೆ ಕಚ್ಚಾತೈಲ ಆಮದು ತಗ್ಗಿಸಲು, ರೈತರನ್ನು ಸಬಲೀಕರಣಗೊಳಿಸಲು ಮತ್ತು ಶುದ್ಧ ಇಂಧನ ಉತ್ತೇಜಿಸಲು ಸಹಕಾರಿಯಾಗಲಿದೆ ಎಂದು ಹೇಳಿದ್ದಾರೆ.

<><><><>

ವಕ್ಫ್ ತಿದ್ದುಪಡಿ ಕಾಯ್ದೆ - ೨೦೨೪ ಕುರಿತಂತೆ ಪರಿಶೀಲನೆ ನಡೆಸಿರುವ ಸಂಸತ್ತಿನ ಜಂಟಿ ಸಮಿತಿ ಇಂದು ಲೋಕಸಭೆಯ ಸ್ಪೀಕರ್ ಓಂ ಬಿರ್ಲಾ ಅವರಿಗೆ ತನ್ನ ವರದಿಯನ್ನು ಸಲ್ಲಿಸಲಿದೆ. ಈ ಕುರಿತು ಸಮಿತಿಯ ಅಧ್ಯಕ್ಷ ಜಗದಾಂಬಿಕ ಪಾಲ್, ಮಾಧ್ಯಮಗಳಿಗೆ ಮಾಹಿತಿ ನೀಡಿದ್ದಾರೆ. ಸಮಿತಿ ಮಸೂದೆಯ ೧೪ ಅಂಶಗಳ ತಿದ್ದುಪಡಿಗಳ ಬಗ್ಗೆ ಕಳೆದ ೬ ತಿಂಗಳಿಂದ ವಿಸ್ತೃತ ಚರ್ಚೆ ನಡೆಸಿ, ತಿದ್ದುಪಡಿಗಳನ್ನು ಅಂತಿಮಗೊಳಿಸಿದೆ ಎಂದು ಹೇಳಿದ್ದಾರೆ.

**ಧ್ವನಿ : ಜಗದಾಂಬಿಕ ಪಾಲ್ (೨೧ ಸೆಕೆಂಡ್ಸ್)**

ವಕ್ಫ್ ತಿದ್ದುಪಡಿ ಕಾಯ್ದೆ - ೨೦೨೪ ದೇಶಾದ್ಯಂತ ಇರುವ ವಕ್ಫ್ ಆಸ್ತಿ ದಾಖಲೆಗಳ ಡಿಜಟಲೀಕರಣ, ಪರಿಶೀಲನೆ ಮತ್ತು ಅಕ್ರಮ ಒತ್ತುವರಿ ತೆರವು ಉದ್ದೇಶವನ್ನು ಹೊಂದಿದೆ.

<><><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ರಾಷ್ಟ್ರಪಿತ ಮಹಾತ್ಮಗಾಂಧೀ ಅವರ ಪುಣ್ಯತಿಥಿ ಹಿನ್ನೆಲೆಯಲ್ಲಿ ಅವರಿಗೆ ಗೌರವ ನಮನ ಸಲ್ಲಿಸಿದ್ದಾರೆ. ಪ್ರಧಾನಿ ಅವರು, ತಮ್ಮ ಸಾಮಾಜಿಕ ಪೋಸ್ಟ್‌ನಲ್ಲಿ ಗಾಂಧೀಜಿಯವರ ಆದರ್ಶಗಳು ಅಭಿವೃದ್ಧಿ ಹೊಂದಿದ ಭಾರತ ನಿರ್ಮಾಣಕ್ಕೆ ದೇಶವಾಸಿಗಳಿಗೆ ಸ್ಫೂರ್ತಿಯಾಗಿವೆ ಎಂದು ಹೇಳಿದ್ದಾರೆ. ಅಲ್ಲದೇ, ರಾಷ್ಟ್ರಕ್ಕಾಗಿ ಹುತಾತ್ಮರಾದ ಈ ಎಲ್ಲರಿಗೂ ಪ್ರಧಾನಿ ಗೌರವ ನಮನ ಸಲ್ಲಿಸಿ, ಅವರ ತ್ಯಾಗ ಮತ್ತು ಸೇವೆಯನ್ನು ಸ್ಮರಿಸಿದ್ದಾರೆ.

<><><><>

ಇಂದು ರಾಷ್ಟ್ರಪಿತ ಮಹಾತ್ಮಗಾಂಧೀಜಿ ಅವರು ಹುತಾತ್ಮರಾದ ದಿನ. ದೇಶಾದ್ಯಂತ ಹುತಾತ್ಮರ ದಿನವಾಗಿ ಆಚರಿಸಲಾಗುತ್ತಿದೆ. ದೆಹಲಿಯ ರಾಜ್‌ಘಾಟ್‌ನಲ್ಲಿರುವ ಗಾಂಧೀಜಿ ಸ್ಮಾರಕದ ಬಳಿ ಇಂದು ಬೆಳಗ್ಗೆ ಸರ್ವಧರ್ಮ ಪ್ರಾರ್ಥನೆ ನಡೆಯಿತು.

**ಧ್ವನಿ : ವೈಷ್ಣವ ಜನತೋ ಲತಾಮಂಗೇಶ್ಕರ್ (೧.೦೩ ನಿಮಿಷ)**

ರಾಷ್ಟ್ರಪತಿ ದ್ರೌಪದಿ ಮುರ್ಮು, ಉಪರಾಷ್ಟ್ರಪತಿ ಜಗದೀಪ್ ಧನ್‌ಕರ್, ಪ್ರಧಾನಮಂತ್ರಿ ನರೇಂದ್ರ ಮೋದಿ ಹಾಗೂ ಲೋಕಸಭೆಯ ಪ್ರತಿಪಕ್ಷದ ನಾಯಕ ರಾಹುಲ್ ಗಾಂಧಿ ಅವರು, ಗಾಂಧೀಜಿಯವರ ಸ್ಮಾರಕಕ್ಕೆ ಪುಷ್ಪನಮನ ಸಲ್ಲಿಸಿದರು. ಅಲ್ಲದೇ ಕೇಂದ್ರ ಸಚಿವರಾದ ರಾಜನಾಥ್ ಸಿಂಗ್, ಮನೋಹರ್ ಲಾಲ್ ಖಟ್ಟರ್, ೩ ಸೇನಾಪಡೆಗಳ ಮುಖ್ಯಸ್ಥರು ಹಾಗೂ ರಕ್ಷಣಾ ಸಿಬ್ಬಂದಿಯ ಮುಖ್ಯಸ್ಥರು ಸಹ ಗೌರವ ನಮನ ಸಲ್ಲಿಸಿದರು.

<><><><>

ಕ್ಯೂಬಾದ ಗ್ವಾಂಟನಾಮೊ ಕೊಲ್ಲಿಯಲ್ಲಿ ಅಮೆರಿಕದ ನೌಕಾನೆಲೆಯಿಂದ ೩೦ ಸಾವಿರ ಹಾಸಿಗೆಗಳ ವಲಸಿಗರ ಬಂಧನ ಸೌಕರ್ಯವನ್ನು ನಿರ್ಮಿಸುವ ಯೋಜನೆಯಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಿಳಿಸಿದ್ದಾರೆ. ಈ ಹೊಸ ಕೇಂದ್ರ ಹಾಲಿ ಇರುವ ಗರಿಷ್ಠ ಭದ್ರತೆಯ ಕಾರಾಗೃಹದಿಂದ ಪ್ರತ್ಯೇಕವಾಗಿರಲಿದೆ. ಅಲ್ಲಿ ಅಪರಾಧ ಹಿನ್ನೆಲೆಯಿರುವ ಅಕ್ರಮ ವಲಸಿಗರನ್ನು ಇಡಲಾಗುವುದು ಎಂದು ಅವರು, ಹೇಳಿದ್ದಾರೆ.

**ಧ್ವನಿ : ಡೊನಾಲ್ಡ್ ಟ್ರಂಪ್ (೨೬ ಸೆಕೆಂಡ್ಸ್)**

ಈ ಮಧ್ಯೆ ಅಮೆರಿಕದ ಅಧ್ಯಕ್ಷರ ಈ ನಿರ್ಧಾರವನ್ನು ಕ್ಯೂಬಾ ಸರ್ಕಾರ ಖಂಡಿಸಿದೆ.

<><><><>

ಪುರುಷರ ಹಾಕಿ ಇಂಡಿಯಾ ಲೀಗ್ ಪಂದ್ಯಾವಳಿಯಲ್ಲಿ ತಮಿಳುನಾಡಿನ ಡ್ರಾಗನ್ಸ್ ಮತ್ತು ಸೂರ್ಮಾ ಹಾಕಿ ಕ್ಲಬ್ ಸೆಮಿಫೈನಲ್‌ನಲ್ಲಿ ತಮ್ಮ ಸ್ಥಾನಗಳನ್ನು ಖಚಿತಪಡಿಸಿಕೊಂಡಿದೆ. ತಮಿಳುನಾಡಿನ ಡ್ರಾಗನ್ಸ್ ನಿನ್ನೆ ರಾತ್ರಿ ಬಿರ್ಸಾಮುಂಡಾ ಹಾಕಿ ಕ್ರೀಡಾಂಗಣದಲ್ಲಿ ಉತ್ತರಪ್ರದೇಶದ ರುದ್ರಾಸ್ ವಿರುದ್ಧ ರೋಚಕ ೨-೨ ರಿಂದ ಡ್ರಾ ಮಾಡಿಕೊಂಡು ಸೆಮಿಫೈನಲ್‌ನಲ್ಲಿ ಸ್ಥಾನ ಗಿಟ್ಟಿಸಿತು. ಮತ್ತೊಂದು ಪಂದ್ಯದಲ್ಲಿ ಸೂರ್ಮಾ ಹಾಕಿ ಕ್ಲಬ್ ಶ್ರಾಚಿ ರಾಹ್ ಬೆಂಗಾಲ್ ಟೈಗರ್ಸ್ ವಿರುದ್ಧ ೩-೦ ಯಿಂದ ಜಯಗಳಿಸಿ, ಸೆಮಿಫೈನಲ್ ತಲುಪಿತು. ನಾಳೆ ಮೊದಲ ಸೆಮಿಫೈನಲ್‌ನಲ್ಲಿ ತಮಿಳುನಾಡು ಡ್ರಾಗನ್ಸ್ ಹಾಗೂ ಶ್ರಾಚಿ ರಾಹ್ ಬೆಂಗಾಲ್ ಟೈಗರ್ಸ್ ಹಾಗೂ

೨ನೇ ಸೆಮಿಫೈನಲ್‌ನಲ್ಲಿ ಜೆಎಸ್‌ಡಬ್ಲ್ಯೂ ಸೂರ್ಮಾ ಹಾಕಿ ಕ್ಲಬ್, ಹೈದರಾಬಾದ್ ತುಫಾನ್ಸ್ ವಿರುದ್ಧ ಸೆಣಸಲಿದೆ.

<><><><>

ಭಾರತ ಮತ್ತು ಇಂಗ್ಲೆಂಡ್ ನಡುವಿನ ೪ನೇ ಟಿ-೨೦ ಅಂತಾರಾಷ್ಟ್ರೀಯ ಪಂದ್ಯ ನಾಳೆ ಪುಣೆಯ ಮಹಾರಾಷ್ಟ್ರ ಕ್ರಿಕೆಟ್ ಒಕ್ಕೂಟದ ಕ್ರೀಡಾಂಗಣದಲ್ಲಿ ನಡೆಯಲಿದೆ. ಪಂದ್ಯ ಭಾರತೀಯ ಕಾಲಮಾನ ಸಂಜೆ ೭ಕ್ಕೆ ಆರಂಭವಾಗಲಿದೆ. ಮತ್ತೊಂದೆಡೆ ೧೯ ವರ್ಷದೊಳಗಿನವರ ಐಸಿಸಿ ಮಹಿಳಾ ಟಿ-೨೦ ವಿಶ್ವಕಪ್ ಸೆಮಿಫೈನಲ್ ಪಂದ್ಯದಲ್ಲಿ ನಾಳೆ ಭಾರತ-ಇಂಗ್ಲೆಂಡ್ ಎದುರು ಸೆಣಸಲಿದೆ. ಪಂದ್ಯ ಕೌಲಲಾಂಪುರದಲ್ಲಿ ಬೆಳಗ್ಗೆ ೧೦-೩೦ ಕ್ಕೆ ಆರಂಭವಾಗಲಿದೆ.

<><><><>

ಬ್ಯಾಂಕಾಕ್‌ನಲ್ಲಿ ನಡೆಯುತ್ತಿರುವ ಥೈಲ್ಯಾಂಡ್ ಮಾಸ್ಟರ್ಸ್ ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಸಿಂಗಲ್ಸ್ ವಿಭಾಗದಲ್ಲಿ ವಿಶ್ವ ಚಾಂಪಿಯನ್ ಕಿಡಂಬಿ ಶ್ರೀಕಾಂತ್ ೨ನೇ ಸುತ್ತು ಪ್ರವೇಶಿಸಿದ್ದಾರೆ. ಇದೀಗ ಮುಂದಿನ ಸುತ್ತಿನಲ್ಲಿ ಅವರು, ಹಾಂಕಾಂಗ್‌ನ ಜೇಸನ್ ಗುಣವಾನ್ ಅವರನ್ನು ಎದುರಿಸಲಿದ್ದಾರೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>